KLE SOCIETY's SCHOOL, NAGARBHAVI, BENGALURU

Date- 11/4/2020

SUB: ಕನ್ನಡ ಅಭ್ಯಾಸಪತ್ರಿಕೆ GRADE: 7 Worksheet - 5

Teacher: Manjula

## ಗದ್ಯಾಂಶ

I. ಈ ಕೆಳಗಿನ ಗದ್ಯಭಾಗವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ:

ಆಗುಂಬೆಯು ಶಿವಮೊಗ್ಗದಿಂದ ಸುಮಾರು 50 ಮೈಲಿ ಪಶ್ಚಿಮಕ್ಕೆ, ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿಯಿಂದ ಸುಮಾರು 30 ಮೈಲಿ ಪೂರ್ವಕ್ಕೆ ಇರುವ ಸಹ್ಯಾದ್ರಿ ಪರ್ವತದ ಅತ್ಯುನ್ನತ ಶ್ರೇಣಿಗಳಲ್ಲೊಂದು.

ಮಳೆಗಾಲದಲ್ಲಿ ಸಿಡಿಲು, ಗುಡುಗು, ಮಿಂಚು, ಮಳೆಗಳಿಂದ ಆಗುಂಬೆ ಭಯಂಕರವೆನಿಸುತ್ತದೆ. ಬಿರುಗಾಳಿಗೋ, ಜಡಿಮಳೆಗೋ ದಿನವೂ ಒಂದಲ್ಲ ಒಂದು ಭೀಮಾಕಾರದ ಮರ ರಸ್ತೆಗೆ ಅಡ್ಡವಾಗಿ ಬಿದ್ದು ಸಂಚಾರವನ್ನು ತಡೆಯುವುದಿದೆ. ಆದ್ದರಿಂದ ಇಲ್ಲಿ ಸಂಚರಿಸುವ ಬಸ್ಸು, ಲಾರಿಗಳ ಚಾಲಕರು ಸಾಮಾನ್ಯವಾಗಿ ಕೊಡಲಿ, ಗರಗಸಗಳನ್ನು ಇಟ್ಟುಕೊಂಡಿರುತ್ತಾರೆ.

ಆಗುಂಬೆಯ ಪೇಟೆಯಿಂದ ಸುಮಾರು ಒಂದು ಮೈಲಿ ಪಶ್ಚಿಮದಲ್ಲಿ ಆಗುಂಬೆಯ ಜಗತ್ಪ್ರಸಿದ್ಧ ಸೂರ್ಯಾಸ್ತಮಾನ ದೃಶ್ಯವನ್ನು ಕಾಣಲು ಬೆಟ್ಟದ ನೆತ್ತಿಯಲ್ಲಿ ಒಂದು ರಂಗಸ್ಥಳವನ್ನು ಮಾಡಿದ್ದಾರೆ. ಈ ದೃಶ್ಯವನ್ನು ನೋಡಲು ದೇಶೀಯರು, ವಿದೇಶೀಯರು ಪ್ರವಾಸಿಗರು ಇಲ್ಲಿಗೆ ಸಾವಿರಾರು ಸಂಖ್ಯೆಯಲ್ಲಿ ಬರುತ್ತಾರೆ. ಈ ಸೂರ್ಯಾಸ್ತಮಾನದ ಕ್ಷಣದಲ್ಲಿ ಆಗುವ ಅನುಭವ ಮಾತಿಗೆ ಮೀರಿದುದು ಮೌನವಾಗಿ ಅನುಭವಿಸುವಂಥದ್ದು. ಆಗುಂಬೆಯು ಜಮದಗ್ನಿ ಮತ್ತು ರೇಣುಕಾದೇವಿಯವರ ಮಗನಾದ ಪರಶುರಾಮನ ಊರು ಎಂಬ ನಂಬಿಕೆ ಇದೆ.

ಪ್ರಶ್ನೆಗಳು:

೧. ಆಗುಂಬೆ ಎಲ್ಲಿದೆ?

೨. ಘಟ್ಟಪ್ರದೇಶಗಳಲ್ಲಿ ಸಂಚರಿಸುವ ವಾಹನ ಚಾಲಕರು ಏನನ್ನು ಇಟ್ಟುಕೊಂಡಿರುತ್ತಾರೆ?

೩. ಆಗುಂಬೆಯ ಬಗ್ಗೆ ಇರುವ ನಂಬಿಕೆ ಏನು?

೪. ಆಗುಂಬೆಯ ಸೂರ್ಯಾಸ್ತದ ವೈಭವವನ್ನು ವರ್ಣಿಸಿ.

KLE SOCIETY'S SCHOOL, NAGARBHAVI, BENGALURU

SUB: ಕನ್ನಡ (ಅಭ್ಯಾಸ ಪತ್ರಿಕೆ) GRADE: 7 Worksheet - 6

## ಪದ್ಯಾಂಶ ಜೀತ ಜೀವಿ

ತಗ್ಗಿ, ಬಗ್ಗಿ, ಕುಗ್ಗಿ, ನೆಗ್ಗಿ
ಹುಟ್ಟಿ ಹುಟ್ಟಿಗೆ ನವೆವೆವು
ತಂದೆ ಮಕ್ಕಳು ಸಾಹುಕಾರಗೆ
ಬಂದಿಯಾಗಿಯೆ ದುಡಿವೆವು.

ಹೆರರ ಲಾಭಕೆ ದುಡಿವ ತೊತ್ತುಗ
-ಳಾಗಿ ನೊಗವನು ಹೊತ್ತೆವು
ಅವರು ಒಂದು ಬಿದ್ದೆವು
ಅವರ ಕೋಪಕೆ ಮಣಿದೆವು

ನಾಡು ನಾಡಿನ ಜೀತಜೀವಿಕೆ → ಇವರ ಕಾಲುವಿಗೆ ಸೆರೆಗಳು
ಇವರ ಹೆಜ್ಜೆಯ ನೊಗದ ಭಾರಕೆ
ಬೆವರು ರಕ್ತವು ಕುದಿವುದು.

ಯಾರಿಗೊ ಉಳುವವರು ಯಾರಿಗೊ ದಣಿವರು
ಯಾರಿಗೊ ಕೊಯ್ವರು ತಿಂಬರು
ಯಾರಿಗೊ ನಗುವರು ಯಾರಿಗೊ ಕುಣಿವರು
ಯಾರಿಗೊ ಬೆವರನು ಬಸಿವರು.

ವಿ. ಸೀತಾರಾಮಯ್ಯ

### ಪ್ರಶ್ನೆಗಳು:

1. ತಂದೆ ಮಕ್ಕಳು ಯಾರಲ್ಲಿ ಬಂಧಿಗಳಾಗಿದ್ದಾರೆ?
2. ಜೀತ ಜೀವಿಗಳು ಹೆರರ ಕೋಪಕ್ಕೆ ಹೇಗೆ ಮಣಿಯುವರು?
3. ಜೀತ ಜೀವಿಗಳು ಕುಸಿದು ಬೀಳಲು ಕಾರಣವೇನು?
4. ಕೊನೆಯ ಪದ್ಯದಲ್ಲಿ ಕಂಡು ಬರುವ ಇಬ್ಬಗೆಯ ನೀತಿಯನ್ನು ವಿವರಿಸಿ.